ಒಮ್ಮೊಮ್ಮೆ ಜೀವನದಲ್ಲಿ ಘಟನೆಯೊಂದು ಘಟಿಸುತ್ತದೆ; ಅದನ್ನು ಹೇಳದಿದ್ದರೆ, ನಿದ್ರೆ ಬರುವುದಿಲ್ಲ. ಇಪ್ಪತ್ತೆಂಟು ದಿನಗಳ ಹಿಂದೆ ನನ್ನೊಂದಿಗೆ ಘಟನೆಯೊಂದು ಘಟಿಸಿತ್ತು. ಅದೊಂದು ದಿನ ದಿಲ್ಲಿಯಿಂದ ನನ್ನ ತಂದೆಯವರ ಫೋನ್ ಬಂತು. ಅವರು, 'ಹರಪಾಲ್! ನೀನು ಅಮೆರಿಕದಲ್ಲಿ ಎಂಜಿನಿಯರ್ ಆಗಿದ್ದಕ್ಕೆ ನಮಗೆ ನಷ್ಟವೇ ಆಗಿದೆ. ನಿನ್ನ ಬೇರು ಅಮೆರಿಕದಲ್ಲಿಲ್ಲ, ಇಲ್ಲಿದೆ. ಇಲ್ಲಿಗೆ ಬಂದು ಮದುವೆ ಮಾಡಿಸಿಕೋ. ಈಗ ನಮಗೆ ಮೊಮ್ಮಗ ಮೊಮ್ಮಗಳ ಅವಶ್ಯಕತೆಯಿದೆ. ನಾವು ಈ ಪ್ರಪಂಚವನ್ನು ಎಂದು ತೊರೆಯುತ್ತೇವೋ ಗೊತ್ತಿಲ್ಲ' ಎಂದರು. ನಾನು ಅವರಲ್ಲಿ ಕ್ಷಮೆಯಾಚಿಸಿದೆ. ಎರಡು ಮೂರು ದಿನಗಳಲ್ಲಿಯೇ ಮೂರು ವಾರಗಳಿಗೆ ದಿಲ್ಲಿಗೆ ಬಂದೆ. ತಂದೆಯವರು ಇಬ್ಬರು ಹುಡುಗಿಯರನ್ನು ಮೊದಲೇ ನೋಡಿದ್ದರು. ಅವರಿಬ್ಬರಲ್ಲಿ ನನಗೆ ಕುಲದೀಪ್ (ಕೈಲಿ) ಹಿಡಿಸಿದಳು. ಅವಳು ಸುಂದರಿಯಾಗಿದ್ದು, ಶ್ವೇತ ವರ್ಣವನ್ನು ಹೊಂದಿದ್ದಳು; ಕಣ್ಣುಗಳು ಅಗಲವಾಗಿದ್ದು, ತೀಕ್ಷ್ಣ ದೃಷ್ಟಿಯನ್ನು ಹೊಂದಿದ್ದಳು, ಅವಳ ಗಲ್ಲಗಳಲ್ಲಿ ಗುಳಿಗಳು ಬೀಳುತ್ತಿದ್ದವು. ಅವಳು ದಿಲ್ಲಿ ವಿಶ್ವವಿದ್ಯಾಲಯದಲ್ಲಿ ಫಿಜಿಕ್ಸ್ ಪ್ರೊಫೆಸರ್ ಆಗಿದ್ದಳು. ಅವಳ ತಂದೆಯ ಅನುಮತಿ ಪಡೆದು ನಾನು ಮತ್ತು ಕೈಲಿ ಒಂದು ದಿನ ಫ್ರೆಂಡ್ಸ್ ಕಾಲೋನಿಯ ಒಂದು ರೆಸ್ಟೋರೆಂಟಿನಲ್ಲಿ ಡಿನ್ನರ್‌ಗೆ ಹೋದೆವು. ನಾನು ಅವಳಿಗೆ, ನಿನಗೆ ಈ ಜಗತ್ತಿನಲ್ಲಿ ಅತಿ ಇಷ್ಟವಾದದ್ದು ಯಾವುದು ಎಂದು ಕೇಳಿದೆ.

"ನೀವು!" ಎಂದಳು. ಅವಳ ಕಣ್ಣುಗಳಲ್ಲಿ ತುಂಟತನವಿತ್ತು. ಕೈಲಿಯ ಉತ್ತರ ಕೇಳಿ ಅವಳನ್ನು ತಬ್ಬಿಕೊಳ್ಳಲು ಅಕಸ್ಮಾತ್ ನನಗೆ ಮನಸ್ಸಾಯಿತು. ಆದರೆ, ಮನಸ್ಸಾಗುವುದಕ್ಕೂ ತಬ್ಬಿಕೊಳ್ಳುವುದಕ್ಕೂ ತುಂಬಾ ಅಂತರವಿದೆ. ನಾವಿಬ್ಬರು ಬಹುಶಃ ಮುಂದಿನ ಮಾತಿನ ಬಗ್ಗೆ ಯೋಚಿಸುತ್ತಾ ಮೌನ ತಾಳಿದೆವು. ಆದರೆ, ಮೌನದ ಅಂತರ ಸಹ ಹೆಚ್ಚುತ್ತಿತ್ತು, ನನ್ನ ಕಳವಳವೂ ಹೆಚ್ಚುತ್ತಿತ್ತು. ಆಗ ಕೈಲಿ ಅಕಸ್ಮಾತ್ ಕೇಳಿದಳು, "ಹೇಳಿ, ನಿಮಗೆ ಈ ಜಗತ್ತಿನಲ್ಲಿ ಅತಿ ಇಷ್ಟವಾದದ್ದು ಯಾವುದು?" ಇದನ್ನು ಕೇಳುತ್ತಲೇ ನನ್ನ ಮನಸ್ಸು ಯೋಚಿಸಿತು. ಅವಳಿಗೆ ಏನು ಹೇಳುವುದು? ನಾನು ಅವಳ ಕಣ್ಣುಗಳಲ್ಲಿ ನೋಡುತ್ತಾ, "ಪ್ರಿಯೆ, ಈ ಬಗ್ಗೆ ನಾನು ಹೇಳಬೇಕಾ?'' ಎಂದು ಹೇಳಿದ್ದೆ. ಕೈಲಿಯ ತುಟಿಗಳಲ್ಲಿ ಲಜ್ಜೆಯ ಮುಗುಳ್ನಗೆ, ಸೂರ್ಯನ ಮೊದಲ ಕಿರಣಗಳಂತೆ ವ್ಯಾಪಿಸಿತು. ಅವಳ ಕಣ್ಣುಗಳಲ್ಲಿ ಹುಣ್ಣಿಮೆಯ ಬೆಳದಿಂಗಳು ಕಲೆತಿತ್ತು.

ಮರುದಿನ ನಾನು ತಂದೆಯವರಿಗೆ ಕೈಲಿಯ ಬಗ್ಗೆ ಒಪ್ಪಿಗೆಯನ್ನು ಸೂಚಿಸಿದೆ. ಅವರು ಕೈಲಿಯ ತಂದೆ ತಾಯಿಗೆ ವಿಷಯ ತಿಳಿಸಿದಾಗ, ತಂದೆಯವರು ಹೇಳಿದ ಪ್ರಕಾರ, ಅವರು ನೆಲದಿಂದ ಆರು ಇಂಚು ಮೇಲಿದ್ದರು. ನಾಲ್ಕು ದಿನಗಳ ಅನಂತರವೇ, ಭಾನುವಾರದಂದು ನನ್ನ ನಿಶ್ಚಿತಾರ್ಥ ನೆರವೇರಿತ್ತು. ಕೈಲಿಯ ಪರಿವಾರದವರು ಬಂದಾಗ ಕೈಲಿ ಸಹ ಅವರೊಂದಿಗಿದ್ದಳು; ಆಗ ಅವಳು ತೆಳು ಗುಲಾಬಿಯ ಸೂಟು ಧರಿಸಿದ್ದಳು. ಕೈಲಿಯ ಮೈಬಣ್ಣ ಮತ್ತು ಅವಳ ಸೂಟಿನ ಬಣ್ಣದಲ್ಲಿ ವ್ಯತ್ಯಾಸವಿರಲಿಲ್ಲ. ಇದ್ದರೂ ಅದು ನನಗೆ ಕಂಡಿರಲಿಲ್ಲ. ಇಂಥ ವೇಳೆಯಲ್ಲಿ ಸೂಟನ್ನು ನೋಡುವವರು ಯಾರು? ನಾನು ಕಣ್ಣಪ್ಪಿಸಿ, ಹೆಚ್ಚು ಹೊತ್ತು ಕೈಲಿಯನ್ನೇ ನೋಡುತ್ತಿದ್ದೆ. ನಿಶ್ಚಿತಾರ್ಥ ಅಚ್ಚುಕಟ್ಟಾಗಿ ನೆರವೇರಿತ್ತು. ಕೈಲಿ ಮತ್ತು ನಾನು ಇಬ್ಬರೂ ಸಂತಸಗೊಂಡಿದ್ದೆವು. ನನ್ನ ಬಗ್ಗೆ ನನ್ನ ತಂದೆ ತಾಯಿಯ ದೂರು ಕೊನೆಗೊಳ್ಳಲಿತ್ತು. ನನ್ನ ಏಕಾಂತವನ್ನು ಒಡೆಯುವ ಸಾಧನ ಸಹ ಸಿದ್ಧವಾಗುತ್ತಿತ್ತು.

ನಿಶ್ಚಿತಾರ್ಥ ಮುಗಿದ ಅನಂತರ ನಾನು ಮರಳಿ ಹೋಗುವ ವಿಷಯವನ್ನು ಪ್ರಸ್ತಾಪಿಸಿ ತಂದೆಯವರು ಕುಲದೀಪಳ ಪರಿವಾರದವರೊಂದಿಗೆ ವಿವಾಹದ ದಿನಾಂಕವನ್ನು ನಿಶ್ಚಿತಗೊಳಿಸುವ ಬಗ್ಗೆ ಚರ್ಚಿಸಿದರು. ಮದುವೆ ತಡವಾಗಿ ನೆರವೇರುವುದು ಎಂದು ನಾನು ಎಲ್ಲರಿಗೂ ಹೇಳಿದೆ. ಆದರೆ, ನನ್ನ ಮನಸ್ಸು ಈ ಕೆಲಸ ಕೂಡಲೇ ಸಂಪನ್ನಗೊಳ್ಳಲಿ ಎಂದು ಬಯಸುತ್ತಿತ್ತು. ನಾನು ನನ್ನ ಮನಸ್ಸನ್ನು ಹತ್ತಿಕ್ಕಿಕೊಂಡು ಹೇಳಿದ್ದೆ, "ನನ್ನ ಮದುವೆ ಇಲ್ಲಿ ನಡೆದರೆ, ಕೈಲಿಗೆ ವೀಸಾ ಸಿಗುವುದು

